ಸಾಕ್ಷಿಯನ್ನು ದಿನಾಂಕಃ 13/03/2024 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ನಂ.4 ರ ಪರ ಶ್ರೀ ಎಮ್ ಕೆ ಎಮ್ ವಕೀಲರಿಂದಃ**

**1.** ಮೃತ ಬಾಲಚಂದ್ರ ಇವರು ನನ್ನ ಹಿರಿಯ ಸಹೋದರ. ನಂತರ ಬಾಲಚಂದ್ರ, ಶೋಭಾ, ನಿರ್ಮಲಾ, ರಮೇಶ ಮತ್ತು ಕಲ್ಪನಾ (ನಾನು) ಈ ರೀತಿಯಾಗಿ ಇರುತ್ತೇವೆ. 1976 ರಲ್ಲಿ ನನಗೆ ಸುಮಾರು 12 -13 ವರ್ಷಗಳು ಇದ್ದವು. ನಮ್ಮ ತಂದೆಯವರು ಬರೆದ ವಾಟ್ನಿ ಪತ್ರ ನನ್ನ ಗಮನಕ್ಕೆ ಇತ್ತು ಎಂದರೆ ಸರಿ ಅಲ್ಲ. ವಾಟ್ನಿ ಪತ್ರ ಯಾವ ಇಸ್ವಿಯಲ್ಲಿ ನನ್ನ ಗಮನಕ್ಕೆ ಬಂದಿತ್ತು ಎಂದು ನನಗೆ ನೆನಪಿರುವುದಿಲ್ಲ. ಈ ದಾವೆಯನ್ನು ಸಲ್ಲಿಸುವಾಗ ವಾಟ್ನಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ವಾಟ್ನಿ ಪತ್ರ ಮಾಡುವಾಗ ನಿಮ್ಮ ಸಮ್ಮತ್ತಿ ಇತ್ತೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿ ಆ ಸಮಯದಲ್ಲಿ ನಾವು ಅಲ್ಪವಯಿ ಇದ್ದೆವು ಮತ್ತು ನಮ್ಮನ್ನು ಪಾರ್ಟಿ ಮಾಡಿಲ್ಲ ಎಂದು ಹೇಳುತ್ತಾರೆ. ವಾಟ್ನಿ ಪತ್ರ ನಿಮ್ಮ ಗಮನಕ್ಕೆ ಬಂದಾಗ ನಿಮ್ಮ ಸಮ್ಮತ್ತಿ ಇತ್ತೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿ ಅದು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ದಾವೆ ದಾಖಲು ಮಾಡಿದಾಗಿನಿಂದ ಇಲ್ಲಿಯವರೆಗೆ ಪ್ರತಿವಾದಿ ನಂ.2 ಮತ್ತು 3 ನ್ಯಾಯಾಲಯಕ್ಕೆ ಬಂದು ಹೋಗಿಲ್ಲ ಎಂದರೆ ಸರಿ ಅಲ್ಲ. ಅವರು ಯಾವ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರು ಆಗಿದ್ದರು ಎಂದು ನನಗೆ ನೆನಪಿಲ್ಲ. ನನ್ನ ಲಗ್ನ 2008 ರಲ್ಲಿ ಗದಗದಲ್ಲಿ ಆಗಿರುತ್ತದೆ. 2 ನೇ ವಾದಿ ಶೋಭಾ ಇವಳ ಮದುವೆ 1972 ಆಗಿರುತ್ತದೆ. 3 ನೇ ವಾದಿ ನಿರ್ಮಲಾ ಇವಳ ಮದುವೆ 1992-93 ರಲ್ಲಿ ಆಗಿರಬಹುದು ಎಂದು ಹೇಳುತ್ತಾರೆ. ಇನ್ನು ಕೆಲವೊಂದು ದಾವಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಾಲುವಿಭಾಗದ ಪ್ರಕಾರ ಅವರು ಅವರು ಕೆಲವೊಂದು ಆಸ್ತಿಗಳನ್ನು ಪಡೆದುಕೊಂಡು, ಕಬ್ಜಾದಲ್ಲಿ ಇದ್ದರು ಎಂದು ಹೇಳುತ್ತಾರೆ. 1976 ರ ವಾಟ್ನಿ ಪತ್ರದ ಪ್ರಕಾರ ದಾವಾದ 4 ನೇ ಪ್ರತಿವಾದಿ ರಮೇಶ ಇವರನ್ನು ಹೊರತುಪಡಿಸಿ, ವಾದಿ ಮತ್ತು ಪ್ರತಿವಾದಿ ನಂ.1 ರಿಂದ 3 ವಾಟ್ನಿ ಪತ್ರದ ಪ್ರಕಾರ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿ ಅಲ್ಲ. ಪಾಲುವಿಭಾಗದಲ್ಲಿ

ಸಿಟಿಎಸ್ ನಂ.1637/4 ಎ ಇದು ನಮ್ಮ ತಂದೆಗೆ ಬಂದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ತಮ್ಮ ಹೆಣ್ಣುಮಕ್ಕಳ ಮದುವೆಗೋಸ್ಕರ ಮತ್ತು ಮನೆತನದ ಅಡಚಣೆಗಾಗಿ ಸಿಟಿಎಸ್ ನಂ.1637/4 ಎ ಆಸ್ತಿಯನ್ನು ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ 3 ನೇ ವಾದಿ ನಿರ್ಮಲಾ ಇವಳ ಲಗ್ನವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿ ಅಲ್ಲ. ನಮ್ಮ ತಂದೆಯವರು ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ 3 ನೇ ವಾದಿ ನಿರ್ಮಲಾ ಇವಳ ಲಗ್ನವನ್ನು ಮಾಡಿ, ಉಳಿದ ಹಣ ರೂ.4,51,000/- ಹಣವನ್ನು ಪೋಸ್ಟ ಆಫೀಸನಲ್ಲಿ 1, 3, 4 ನೇ ವಾದಿಯರ ಹೆಸರಿಗೆ ಎಫ್ ಡಿ ಇಟ್ಟಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆಯವರು ನನ್ನ ಮತ್ತು 3 ನೇ ವಾದಿ ಕಡೆಯಿಂದ ಹಣ ತೆಗೆದುಕೊಂಡಿದ್ದರು, ಅದನ್ನು ಮರುಪಾವತಿಸಲು ಈ ಸದರಿ ಹಣವನ್ನು ನಮ್ಮ ಹೆಸರಿನಲ್ಲಿ ಇಟ್ಟಿದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆಯವರು ನನ್ನ ಕಡೆಯಿಂದ ರೂ.1,00,000/- ಹಣ ಪಡೆದುಕೊಂಡಿದ್ದರು,ನನ್ನ ಲಗ್ನವಾದನಂತರ ನನ್ನ ತಂದೆಯು ನನಗೆ ರೂ.1,00,000/- ಹಣವನ್ನು ಮರುಪಾವತಿಸಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಹೆಸರಿನಿಂದ ಮತ್ತು 3 ನೇ ವಾದಿ ಹೆಸರಿನಿಂದ ರೂ.4,51,000/- ಹಣವನ್ನು ಪೋಸ್ಟ ಆಫೀಸನಲ್ಲಿ ಯಾವುದೇ ಎಫ್ ಡಿ ಇರುವುದಿಲ್ಲ ಎಂದು ಹೇಳುತ್ತಾರೆ. ಒಂದು ಲಕ್ಷ ರೂಪಾಯಿ ನಮ್ಮ ತಂದೆಯವರಿಗೆ ನಾನು ಕೊಟ್ಟ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇರುವುದಿಲ್ಲ. ಸಾಕ್ಷಿ ಮುಂದುವರೆದು ಹಣದ ಅಡಚಣೆ ಇದ್ದಾಗ ನನ್ನ ಹತ್ತಿರ ಹಣ ಪಡೆದುಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಂದೆಯವರು 3 ಲಕ್ಷ 15 ಸಾವಿರ ಹಣವನ್ನು ಪೋಸ್ಟ ಆಫೀಸನಲ್ಲಿ ಎಫ್ ಡಿ ಇಟ್ಟಿದ್ದರು ಎಂದರೆ ಸರಿ ಅಲ್ಲ. 3 ಲಕ್ಷ 15 ಸಾವಿರ ಬಡ್ಡಿ ಹಣ ನಮ್ಮ ತಂದೆಯವರಿಗೆ ಹೋಗಬೇಕು ಎಂದು ನಾವು ಒಪ್ಪಿಗೆ ಕೊಟ್ಟಿದ್ದೇವು ಎಂದರೆ ಸರಿ ಅಲ್ಲ. 3 ಲಕ್ಷ 15 ಸಾವಿರ ಹಣ ನಮ್ಮ ತಂದೆ ತೀರಿಕೊಂಡ ನಂತರ, ಆ ಸದರಿ ಹಣ ನಮ್ಮ ತಾಯಿಗೆ ಬಂತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ, ಈ ಸದರಿ ಹಣವನ್ನು ನನ್ನ ತಾಯಿ, ನಾನು ಮತ್ತು ನನ್ನ ಸಹೋದರಿಯಾದ 3 ನೇ ವಾದಿ

ಪಡೆದುಕೊಂಡಿದ್ದೇವೆ ಎಂದರೆ ಸರಿ ಅಲ್ಲ. ನನ್ನ ಮದುವೆಯನ್ನು 2007 ರಲ್ಲಿ ನಮ್ಮ ತಂದೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ನನ್ನ ಲಗ್ನ ದಿಃ 11/02/2008 ರಂದು ಆಗಿರುತ್ತದೆ ಎಂದು ಹೇಳುತ್ತಾರೆ. ಪೋಸ್ಟ ಆಫೀಸನಲ್ಲಿ ಇದ್ದ ಹಣದಿಂದಲೇ ನನ್ನ ಲಗ್ನ ಮಾಡಿಕೊಟ್ಟಿದ್ದಾರೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ನನ್ನ ಸ್ವಂತ ಖರ್ಚಿನಿಂದ ನಾನು ನನ್ನ ಲಗ್ನವನ್ನು ಮಾಡಿಕೊಂಡಿದ್ದೇನೆಂದು ಹೇಳುತ್ತಾರೆ. ನನ್ನ ಲಗ್ನದ ಸಮಯದಲ್ಲಿ ದಿಃ 27/10/2010 ರಂದು ಸಹೋದರಿಯಾದ ಶೋಭಾ, ನಿರ್ಮಲಾ ಮತ್ತು ನಾನು 10 ತೊಲೆ ಬಂಗಾರ, 100 ತೊಲೆ ಬೆಳ್ಳಿ , ಒಂದು ಲಕ್ಷ 10 ಸಾವಿರ ಹಣವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿ ಅಲ್ಲ. ಈ ಮೇಲೆ ಹೇಳಿದ ವಸ್ತುಗಳನ್ನು ಹಿರಿಯರ ಸಮಕ್ಷಮ ನಾವು ಪಡೆದುಕೊಂಡಿದ್ದೇವೆ ಎಂದರೆ ಸರಿ ಅಲ್ಲ. ನಾನು ವಾಟ್ನಿ ಪತ್ರ ಓದಿರುತ್ತೇನೆ, ಆದರೆ ಅದನ್ನು ಯಾವಾಗ ಓದಿರುತ್ತೇನೆ ಎಂದು ನಿಖರವಾಗಿ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ವಾಟ್ನಿ ಪತ್ರವನ್ನು 2007 ರಲ್ಲಿ ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿ ಅಲ್ಲ. ನಾನು ಎಲ್ಲಾ ಬಂಗಾರ, ಬೆಳ್ಳಿ ಹಣ ಪಡೆದಿದ್ದರೂ ಸಹಿತ ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. 4 ನೇ ಪ್ರತಿವಾದಿ ನಮ್ಮನ್ನು ನೋಡಿಕೊಂಡು ಹೋಗಬೇಕು ಎಂದು ಎಲಲಿಯೂ ನಮೂದು ಮಾಡಿಲ್ಲ ಎಂದರೆ ಸರಿ ಅಲ್ಲ. ವಾಟ್ನಿ ಪತ್ರದಲ್ಲಿ ನಮ್ಮ ಲಗ್ನದ ಸಮಯದಲ್ಲಿ ಬಂಗಾರ, ಬೆಳ್ಳಿ ಹಣ ಪಡೆದುಕೊಂಡಿದ್ದರಿಂದ ನಾನು ಮತ್ತು ನನ್ನ ಸಹೋದರಿಯರ ಶಿಕ್ಷಣ ಮತ್ತು ಲಗ್ನದ ಖರ್ಚನ್ನು ನಾವೇ ನೋಡಿಕೊಯಿಡ ಹೋಗಬೇಕಾಗಿತ್ತು ಎಂದರೆ ಸರಿ ಅಲ್ಲ. ನನ್ನ ಮುಖ್ಯ ವಿಚಾರಣಾ ಸಂಗತಿಯಲ್ಲಿ ಸುಳ್ಳುಪ್ರಮಾಣ ಪತ್ರ ನಮೂದುಮಾಡಿದ್ದೇನೆಂದರೆ ಸರಿ ಅಲ್ಲ. 1976 ರಲ್ಲಿಹೆಣ್ಣು ಮಕ್ಕಳಿಗೆ ಸರಿಸಮಾನವಾದ ಹಿಸ್ಸೆ ಇರಲಿಲ್ಲ ಎಂದರೆ ಸರಿ ಅಲ್ಲ. ದಿಃ 28/11/1987 ರಂದು ನನ್ನ ಮತ್ತು ಮೃತ ಬಾಲಚಂದ್ರ ಮಧ್ಯದಲ್ಲಿ ಒಂದು ಪವರ್ ಆಫ್ ಅಟೋರನಿ ಬರಯಿಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಲಗ್ನದ ಸಮಯದಲ್ಲಿ ಬಾಲಚಂದ್ರಯ್ಯ ಮತ್ತು 4 ನೇ ಪ್ರತಿವಾದಿ ರಮೇಶ ಲಗ್ನದ ಸಮಯದಲ್ಲಿ ಬಂಗಾರ, ಬೆಳ್ಳಿ ಹಣ ಕೊಡಬೇಕಾಗಿತ್ತು, ಆದರೆ ಅವರು ಕೊಟ್ಟಿರುವುದಿಲ್ಲ. ಜಿಪಿ ಎ ದಲ್ಲಿ 4 ನೇ ಪ್ರತಿವಾದಿಯರ

ಹೆಸರು ನಮಾದು ಇಲ್ಲ ಎದರೆ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಬಾಲಚಂದ್ರ ಇವರು ಡಿಸಿ ನ್ಯಾಯಾಲಯದಲ್ಲಿ ತನ್ನ ಆಸ್ತಿಯಲ್ಲಿ ನಮ್ಮ ಹೆಸರನ್ನು ಕಡಿಮೆ ಮಾಡಿ ತನ್ನ ಹೆಸರನ್ನು ಹೆಚ್ಚಿಕೊಂಡಿದ್ದಾನೆ ಎಂಬ ಪ್ರಶ್ನೆಗೆ ಸಾಕ್ಷಿ ನಮಗೆ ಯಾವುದೇ ಆಸ್ತಿಬಂದಿಲ್ಲ ಮತ್ತು ಆಸ್ತಿ ಹಂಚಿಕೆಯಾಗಿಲ್ಲ ಎಂದು ಹೇಳುತ್ತಾರೆ. ಜಮೀನು ಆರ್ ಎಸ್ ನಂ.572 ದ 573 ದ ಸಿಟಿಎಸ್ ನಂ.3796/8 ಇವುಗಳು 4 ನೇ ಪ್ರತಿವಾದಿ ರಮೇಶ ಈತನಿಗೆ ಬಂದ ಆಸ್ತಿಗಳು ಎಂಬ ಪ್ರಶ್ನೆಗೆ ಸಾಕ್ಷಿ ಬಂದಿರಹುದು ಎಂದು ಹೇಳುತ್ತಾರೆ. ದಿಃ 21/10/1992 ರಲ್ಲಿ ನನ್ನ ಸಹೋದರಿಯರ ಹೆಸರುಗಳು ದಾವಾ ಜಮೀನುಗಳ ಉತಾರದಲ್ಲಿ ಹತ್ತಿದ್ದವು ಎಂಬ ಪ್ರಶ್ನೆಗೆ ಸಾಕ್ಷಿ ಅದುನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾವು ಉದ್ದೇಶಪೂರ್ವಕವಾಗಿ ಜಮೀನು ಪಹಣಿಯಲ್ಲಿ ಹೆಸರು ಹಚ್ಚಿದ್ದೇವೆ ಎಂದರೆ ಸರಿ ಅಲ್ಲ.4 ನೇ ಪ್ರತಿವಾದಿ ಹೆಸರಿಗೆ ಜಮೀನುಗಳನ್ನು ಹಚ್ಚಲು ನಾವು ಆತನ ಕಡೆಯಿಂದ 4 ಲಕ್ಷ ರೂ ಹಣ ಪಡೆದಿದ್ದೇವೆಂದರೆ ಸರಿ ಅಲ್ಲ. 4 ನೇ ಪ್ರತಿವಾದಿಗೆ 1990 ರ ವರೆಗೆ ವಾಟ್ನಿ ಬಗ್ಗೆ ಗೊತ್ತಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಮನೆತನದ ವ್ಯವಹಾರವನ್ನು ನಾವು ಮತ್ತು ಬಾಲಚಂದ್ರ ಸೇರಿ ಮಾಡುತ್ತಿದ್ದೇವು ಎಂದರೆ ಸರಿ ಅಲ್ಲ. 4 ನೇ ಪ್ರತಿವಾದಿ ತನಗೆ ಬಂದ ಆದಾಯವನ್ನು ತನ್ನ ತಂದೆಗೆ ತಾಯಿಗೇ ಕೊಡುತ್ತಿದ್ದರು, ನಮ್ಮ ತಂದೆ ತಾಯಿ ಅದನ್ನು ನಮಗೆ ಬಳಸುತ್ತಿದ್ದರು ಎಂದರೆ ಸರಿ ಅಲ್ಲ. ಸಿಟಿಎಸ್ ನಂ.1635/274 ನೇ ಪ್ರತಿವಾದಿಗೆ ಬಂದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ಗೊತಾಗದ ರೀತಿಯಲ್ಲಿ ನಾನು ಮತ್ತು ನನ್ನ ಸಹೋದರಿಯರು ಸೇರಿಕೊಂಡು 4 ನೇ ಪ್ರತಿವಾದಿಗೆ ಗೊತ್ತಾಗದ ರೀತಿಯಲ್ಲಿ ಹೇಳದೇ ಕೇಳದೆ ಮಾರಾಟ ಮಾಡಿದ್ದೇವೆ ಎಂದರೆ ಸರಿ ಅಲ್ಲ. ಮಾರಾಟ ಮಾಡಿ ಬಂದ ಹಣವನ್ನು ನಾವು ಸಹೋದರಿಯರು ಮತ್ತು ನನ್ನ ತಾಯಿ ಹಂಚಿಕೊಂಡಿದ್ದೇವೆ ಎಂದರೆ ಸರಿ ಅಲ್ಲ. ಸಿಟಿಎಸ್ ನಂ.5/1 ಬಿ 1998 ರಲ್ಲಿ ನಮ್ಮ ತಂದೆ ಗೋಪಾಲ ಎನ್ನುವವರಿಗೆ ರೂ.3,80,000/- ಗಳಿಗೆ ಆಸ್ತಿಯನ್ನು ಒಟ್ಟಿಸಿ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಈ ಹಣವನ್ನು ಗೋಪಾಲ ಎನ್ನುವವರಿಗೆ ಕೊಟ್ಟು, ಆಸ್ತಿಯನ್ನು ಬಿಡಿಸಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲ. ನಮ್ಮ

ತಂದೆಯವರು ಗೋಪಾಲ ಇವರಿಗೆ ಬಾಡಿಗೆ ಕೊಟ್ಟಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಅದು ನಮ್ಮ ತಂದೆಗೆ ಮತ್ತು ಗೋಪಾಲ ಇವರಿಗೆ ಗೊತ್ತಿರುತ್ತದೆ ಎಂದು ಹೇಳುತ್ತಾರೆ. ದಿಃ 01/09/2010 ರಂದು ನಮ್ಮ ತಂದೆಯವರು ಗೋಪಾಲ ಇವರಿಗೆ ಬಾಡಿಗೆ ಪತ್ರವನ್ನು ಬರೆದುಕೊಟ್ಟರು ಎಂಬ ಪ್ರಶ್ನೆಗೆ ಸಾಕ್ಷಿ ಆ ಸಮಯದಲ್ಲಿ ನಾನು ನನ್ನ ಗಂಡನ ಮನೆಯಲ್ಲಿ ಇದ್ದೆ ಎಂದು ಹೇಳುತ್ತಾರೆ. ಪ್ರತಿ ತಿಂಗಳು ಬಾಡಿಗೆ ರೂ.8000/- 2011 ರಲ್ಲಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆಯ ಹತ್ತಿಕೊಂಡು ಪುಣ್ಯಭೂಮಿ ಎಂಬ ಹುಟೇಲ ಇದೆ ಎಂದರೆ ಸರಿ. ನನ್ನ ತಾಯಿ ಹೆಸರಿನಿಂದ ಎಲ್ಲಾ ಸೇರಿಸಿ ರೂ.5,40,000/- , 13,200/-, 1,90,000/- ಹಣ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾವು 4 ನೇ ಪ್ರತಿವಾದಿ ಕಡೆಯಿಂದ ಒಟ್ಟು ರೂ.2,51,500/- ಗಳನ್ನು ಬಾಡಿಗೆ ಹಣವನ್ನು ಪಡೆದಿದ್ದೇವೆ ಎಂದರೆ ಸರಿ ಅಲ್ಲ. ಈ ಸದರಿ ಹಣವನ್ನು ನಾವು ಪಡೆದುಕೊಂಡು, ನಾವು ಉಪಯೋಗಿಸಿಕೊಂಡಿದ್ದೇವೆ ಎಂದರೆ ಸರಿ ಅಲ್ಲ. ನಮ್ಮ ತಾಯಿ ತೀರಿಕೊಂಡಾಗಿನಿಂದ ಆ ಸದರಿ ಹಣ ಇನ್ನು ಗೋಪಾಲ ಬಾಡಿಗೆದಾರನ ಡಿಪಾಸಟಿನಲ್ಲಿ ಇರುತ್ತದೆ. ಗೋಪಾಲ ಇವರು ವಾದಿಯರ ಮತ್ತು 4 ನೇ ಪ್ರತಿವಾದಿಯರ ಹೆಸರಿಗೆ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ ಅಲ್ಲ. ಒಪ್ಪಿಗೆ ಪತ್ರದ ಮೇಲೆ ನಾನು ಸಹಿ ಮಾಡಿದ್ದೇನೆಂದರೆ ಸರಿ ಅಲ್ಲ. ನನ್ನ ತಾಯಿ ರೂ.11,68,442/- ಬಾಡಿಗೆ ಹಣವನ್ನು ಪಡೆದುಕೊಂಡು, ಆಕೆಯ ಎಲ್ಲಾ ಹೆಣ್ಣು ಮಕ್ಕಳಿಗೆ ಹಂಚಿದ್ದಾಳೆ ಎಂದರೆ ಸರಿ ಅಲ್ಲ. ನನ್ನ ತಾಯಿಗೆ ಕ್ಯಾನ್ಸರ ಆದ ಬಗ್ಗೆ 4 ನೇ ಪ್ರತಿವಾದಿಗೆ ತಿಳಿಸಿಲ್ಲ ಎಂದರೆ ಸರಿ ಅಲ್ಲ. ನಾನು ಹಣ ಪಡೆದುಕೊಳ್ಳುವ ಉದ್ದೇಶಕ್ಕಾಗಿ 4 ನೇ ಪ್ರತಿವಾದಿ ಮತ್ತು ನನ್ನ ತಾಯಿಯನ್ನು ಮನೆಗೆ ಕರೆದುಕೊಂಡು ಹೋಗಿ ಹಣ ಪಡೆದಿದ್ದೇನೆಂದರೆ ಸರಿ ಅಲ್ಲ. ಈ ಸದರಿ ಹಣವನ್ನು ನಮ್ಮ ಮನೆಯ ಅಡಚಣೆಗೆ ಬಳಸಿದ್ದೇವೆಂದೆರೆ ಸರಿ ಅಲ್ಲ. ಹೋಟೆಲ್ ಪುಣ್ಯಭೂಮಿ ಕಬ್ಜಾವತ್ತಿ ಕರಾರು ಪತ್ರಕ್ಕೆ ನಾನು ಸಹಿ ಮಾಡಿದ್ದೇನೆಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ವೈದ್ಯಕೀಯ ದಾಖಲೆಗಳ್ನು ಸೃಷ್ಟನೆ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸರಿ ಅಲ್ಲ. ನಾನು ಮತ್ತು 3 ನೇ ವಾದಿ ನಿರ್ಮಲಾ ಸಿಟಿ ಸರ್ವೇ ಇಲಾಖೆಗೆ ಹೋಗಿ,ನನ್ನ ಹೆಸರಿನಲ್ಲಿ

ದಾಖಲೆಗಳು ಆಗಬೇಕೆಂದು ಬಾಲಚಂದ್ರ ಆಸ್ತಿಗೆ ನಾವು ಅರ್ಜಿ ಕೊಟ್ಟಿದ್ದೇವೆ ಎಂದರೆ ನನಗೆ ನೆನಪಿಲ್ಲ. ಸಿಟಿ ಸರ್ವೇ ಇಲಾಖೆಯವರು ನೀವು ನ್ಯಾಯಾಲಯಕ್ಕೆ ಹೋಗಿ ಪರಿಹಾರ ಪಡೆಯರಿ ಎಂದು ಹಿಂಬರಹ ಬರೆದುಕೊಟ್ಟಿದ್ದಾರೆ ಎಂದರೆ ಸರಿ ಅಲ್ಲ.

**2.** ವಾಟ್ನಿ ಪತ್ರದ ಪ್ರಕಾರ ವಾದಿ ನಂ.1 ಮತ್ತು ನನ್ನ ಸಹೋದರಿ ಕೂಡಿಕೊಂಡು ಪ್ರತಿವಾದಿ ನಂ.4 ಇವರಿಗೆ 60 ತೊಲೆ ಬಂಗಾರ, 100 ತೊಲೆ ಬೆಳ್ಳಿ ಕೊಡಬೇಕು ಅಂತಾ ಕರಾರು ಪತ್ರದಲ್ಲಿ ನಮೂದು ಇದೆ ಎಂದರೆ ಸಾಕ್ಷಿ ವಾಟ್ನಿ ಪತ್ರದಲ್ಲಿ ನಾವು ಪಕ್ಷಗಾರರು ಇರುವುದಿಲ್ಲ ಮತ್ತು ವಾಟ್ನಿ ಪತ್ರವು ನಮ್ಮ ತಂದೆ ಹಾಗೂ 1 ನೇ ಪ್ರತಿವಾದಿಯ ತಂದೆ ಮತ್ತು 4 ನೇ ಪ್ರತಿವಾದಿ ಮಧ್ಯದಲ್ಲಿ ಮತ್ತು 1 ನೇ ವಾದಿಯ ಮಧ್ಯದಲ್ಲಿ ಆಗಿರುವುದರಿಂದ ಅದು ನಮಗೆ ಸಂಬಂಧ ಇರುವುದಿಲ್ಲ ಎಂದು ಹೇಳುತ್ತಾರೆ. 1978 ರಲ್ಲಿ 4 ನೇ ಪ್ರತಿವಾದಿಗೆ ಎಷ್ಟು ವಯಸ್ಸು ಇತ್ತು ಎಂದು ನನಗೆ ಗೊತ್ತಿಲ್ಲ. ವಾಟ್ನಿ ಪತ್ರದಲ್ಲಿ ನಮ್ಮ ತಾಯಿ ಸಹಿ ಮಾಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಮೇಲಿನ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹಿತ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪುಟಸಂಖ್ಯೆಃ 3 ಪ್ಯಾರಾ ನಂಃ 7, ಪುಟಸಂಖ್ಯೆಃ 3 ಪ್ಯಾರಾ ನಂಃ 8, ಪುಟಸಂಖ್ಯೆಃ 2 ಪ್ಯಾರಾ ನಂಃ 4 ರಲ್ಲಿ ಹೇಳಿದ ಸಂಗತಿಗಳು ವಾದ ಪತ್ರದಲ್ಲಿ ನಮೂದು ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ 4 ನೇ ಪ್ರತಿವಾದಿಯು ಹೆಚ್ಚುವರಿ ಪ್ರತಿವಾದ ಪತ್ರ ಸಲ್ಲಿಸಿದ್ದರಿಂದ ನಾವು ಅದಕ್ಕೆ Re-joinder ಸಲ್ಲಿಸಿದ್ದರಿಂದ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆಗೆ ಸಂಪೂರ್ಣ ಆಸ್ತಿಯನ್ನು ನನ್ನ ಹೆಸರಿಗೆ ಹಚ್ಚಬೇಕೆಂದು ನಾನು ಬೇಡಿಕೆ ಮಾಡಿದ್ದೆ ಎಂದರೆ ಸರಿ ಅಲ್ಲ. ನಮ್ಮ ಮನೆತನಕ್ಕೆ ಬರತಕ್ಕ ಬಾಡಿಗೆಯನ್ನು ನಾನು, ನನ್ನ ತಾಯಿ, ನನ್ನ ಸಹೋದರಿ ಪಡೆಯುತ್ತಿದ್ದೇವು, 4 ನೇ ಪ್ರತಿವಾದಿಗೆ ಕೊಡುತ್ತಿರಲಿಲ್ಲ ಎಂದರೆ ಸರಿ ಅಲ್ಲ. ವಾಟ್ನಿ ಪತ್ರದಲ್ಲಿ 4 ನೇ ಪ್ರತಿವಾದಿಯು ಬಂಗಾರ, ಬೆಳ್ಳಿ, ಹಣ ಕೊಡಬೇಕೆಂದು ಠರಾವು ಆಗಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿಯ ಮೇಲೆ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ವ ಹಿತಸಕ್ತಿ ಇಲ್ಲದೇ ಇದ್ದರೂ ಸಹಿತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

**ಪಾಟೀ ಸವಾಲುಃ- ಶ್ರೀ. ಜಿ ಬಿ ಎನ್ ವಕೀಲರಿಂದಃ**

**ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**